## ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ಇವರ ನಡವಳಿಗಳು

**ವಿಷಯ:** 2018-19ನೇ ಸಾಲಿನಲ್ಲಿ ಮೊರಾರ್ಜಿದೇಸಾಯಿ ವಸತಿ ಶಾಲೆ/ ಕಾಲೇಜು, ಮಾದರಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಲ್ಲಿ ಅರೇಬಿಕ್ ಶಿಕ್ಷಣ ಭೋಧನೆ ಮಾಡುವ ಅತಿಥಿ ಶಿಕ್ಷಕರಿಗೆ ಗೌರವಧನ ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲುಡಿ 172 ಎಂಡಿಎಸ್ 2016, ದಿ: 03.01.2017 ಮತ್ತು ತಿದ್ದುಪಡಿ ಆದೇಶ ದಿ:27-01-2017.
2. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲುಡಿ 251 ಎಂಡಿಎಸ್ 2018, ದಿ: 11-04-2018.
3. ಸರ್ಕಾರಿ ಆದೇಶ ಸಂಖ್ಯೆ: ಎಂಡಬ್ಲುಡಿ 169 ಎಂಡಿಎಸ್ 2017, ದಿ: 06.04.2017.

<<<>>>

**ಪ್ರಸ್ತಾವನೆ:**

ಅಲ್ಪಸಂಖ್ಯಾತರ ಕಲ್ಯಾಣ ಹಜ್ ಮತ್ತು ವಕ್ಫ್ ಇಲಾಖೆಯಲ್ಲಿ 2016-17ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಮದರಸಗಳಿಗೆ ಆಧುನಿಕರಣ, ಔಪಚಾರಿಕ ಮತ್ತು ಗಣಿಕೀಕೃತ ಶಿಕ್ಷಣ ನೀಡಲು ಅನುದಾನ ಮಂಜೂರು ಮಾಡುವ ಯೋಜನೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಉಲ್ಲೇಖಿತ (1) ರಲ್ಲಿ ಸರ್ಕಾರದ ಆದೇಶ ಹೊರಡಿಸಲಾಗಿದೆ.

ಉಲ್ಲೇಖಿತ (2)ರಲ್ಲಿ ಮದರಸದಲ್ಲಿ ಉತ್ತಮ ಗುಣವಟ್ಟದ ಶಿಕ್ಷವನ್ನು ಒದಗಿಸುವ ಸಲುವಾಗಿ (Providing quality Education in Madrasa) 2018-19ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2225-03-102-3-10(103) ಸರ್ಕಾರದಿಂದ ರೂ. 40.00 ಕೋಟಿ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಅದರಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ರೂ. 1333.20 ಲಕ್ಷ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿದೆ.

ಉಲ್ಲೇಖಿತ (3)ರ ಆದೇಶದಲ್ಲಿ ಷರತ್ತು ಸಂಖ್ಯೆ: 5ರಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ನಡೆಸಲ್ಪಡುತ್ತಿರುವ ಮೊರಾರ್ಜಿದೇಸಾಯಿ ವಸತಿ ಶಾಲೆ/ ಕಾಲೇಜು, ಮಾದರಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆ/ಮೌಲಾನಾ ಆಜಾದ್ ಮಾದರಿ ಶಾಲೆಗಳಲ್ಲಿ ಅರೇಬಿಕ್ ಶಿಕ್ಷಣ ಭೋಧನೆ ಮಾಡಲು ಮಾಸಿಕ ರೂ. 7,000/- (ಏಳು ಸಾವಿರ ರೂಗಳು ಮಾತ್ರ) ಗೌರವ ಧನ ನೀಡಿ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ರವರು ಕ್ರಮವಹಿಸತಕ್ಕದ್ದು ಎಂದು ಆದೇಶಿಸಲಾಗಿದೆ. ಅದರಂತೆ, ಅಲ್ಪಸಂಖ್ಯಾತರ 118 ಮೊರಾರ್ಜಿದೇಸಾಯಿ ವಸತಿ ಶಾಲೆಗಳು/ಕಾಲೇಜು (ಅನುಬಂಧ-1), 100 ಮೌಲಾನ ಆಜಾದ್ ಮಾದರಿ ಶಾಲೆ (ಅನುಬಂಧ-2 ಒಟ್ಟು 218 ಶಾಲೆಗಳಿಗೆ ತಲಾ ಒಂದು ಅರೇಬಿಕ್ ಅತಿಥಿ ಶಿಕ್ಷಕರಿಗೆ ಮಾಸಿಕ ರೂ. 7,000/- ರಂತೆ 6 ತಿಂಗಳಿಗೆ ಒಟ್ಟು ರೂ. 91.56 ಲಕ್ಷಗಳನ್ನು ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರಿಗೆ ಈ ಕೆಳಕಂಡ ಆದೇಶ.